ಎಕ್ಸಿಕ್ಯೂಷನ್ ಆಗುವುದರಲ್ಲಿ ತಡವಾಗಿದೆ. ಅನೇಕ ಲ್ಯಾಂಡ್‌ಲ್ಯಾಡ್ಲ್ಸ್‌ಗಳು ನದಿ ದಂಡೆಯಲ್ಲಿ ಮೋಸ್ಟ್ ಫರ್ಟೈಲ್ ಲ್ಯಾಂಡ್ ಇಟ್ಟುಕೊಂಡಿರುವವರು ಆ ಒಂದು ಪ್ರಾಜೆಕ್ಟ್‌ಗೆ ಬರತಕ್ಕಂಥವರು ಏನು ಇದ್ದಾರೆ, ಅವರು ಲಿಫ್ಟ್ ಇರಿಗೇಷನ್ ನಾವು ತೆಗೆದುಕೊಂಡರೆ ಸೀಲಿಂಗ್ ಒಳಗಡೆ ಬರುತ್ತದೆ ಎಂದು ಅನೇಕ ಜನ ಇದನ್ನು ತೆಗೆದುಕೊಳ್ಳುವುದಿಲ್ಲ. ಆ ನೀರಿಗಿಂತಲೂ ಈಗಿರುವ ನಮಗೆ ಎಕ್ಸೀಡಿಂಗ್ ಔಳಿ ಎಕರೆಗಳು ಸಿಗುತ್ತದೆ ಎಂದು ತಿಳಿದುಕೊಂಡು ಅನೇಕ ಜನ ಕುಳೂರು ವಿಲೇಜ್ ಲಿಫ್ಟ್ ಇರಿಗೇಷನ್ ಗೆ ಪ್ರಾಜೆಕ್ಟ್ ಏನು ಇದೆ, ಅದು ಕಂಪ್ಲೀಟ್ ಆಗಿದ್ದರೂ ಅಲ್ಲಿ ರೈತರು ನೀರನ್ನು ತೆಗೆದುಕೊಳ್ಳುತ್ತಿಲ್ಲ. ಏಕೆಂದರೆ ಅಲ್ಲಿ ನಾಲ್ಕು ಜನರ ಲ್ಯಾಂಡ್ ಇದೆ. ಸೀಲಿಂಗ್ ಒಳಗಡೆ ಬರುತ್ತೇವೆ ಎಂದು ಅನೇಕ ರೈತರುಗಳು, ಅಗ್ರಿಕಲ್ಚರಿಸ್ಟ್‌ಗಳು ಇವತ್ತಿನ ದಿವಸ ನೀರನ್ನು ತೆಗೆದುಕೊಳ್ಳುತ್ತಿಲ್ಲ. ಇದು ಒಂದು ಮುಖ್ಯವಾದ ಕಾರಣ. ಇದರಿಂದ ಈಗಾಗಲೇ ಕೆಲವು ಯೋಜನೆಗಳನ್ನು ಫೇಲೂರ್ ಮಾಡಿದ್ದಾರೆ. ಅಂಥವರ ಮೇಲೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಲ್ಯಾಂಡನ್ನು ಉಪಯೋಗಿಸಿಕೊಂಡು ಕೋ-ಆಪರೇಟಿವ್ ಸೊಸೈಟಿಗೆ ನೇರವಾಗಿ ಕೊಟ್ಟು ರೈತರಿಗೆ ಕಾಂಪೆನ್‌ಷೇಶನ್ ಕೊಡುವುದು. ಇದರ ಬಗ್ಗೆ ತಾವು ಏನು ಯೋಜನೆಯನ್ನು ಮಾಡಿದ್ದೀರಿ?

ಶ್ರೀ ಹೆಚ್. ಡಿ. ದೇವೇಗೌಡ.—ಈ ವಿಷಯ ಸ್ವಲ್ಪ ಗಹನವಾದ ವಿಷಯ. ಇದರ ಬಗ್ಗೆ ತರಾತುರಿಯಾಗಿ ಉತ್ತರ ಹೇಳುವುದು ಕಷ್ಟ. ಈಗ ಅದಕ್ಕೆ ಏನಾದರೂ ನಾವು ಈಗಿರತಕ್ಕಂಥ ಕಾಯ್ದೆ ವ್ಯವಸ್ಥೆಯಲ್ಲಿ ಮಾಡತಕ್ಕಂಥ ಸಾಧ್ಯತೆ ಇದೆಯೇ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. To enforce them to take water ಇಲ್ಲ ಎಂದು ಹೇಳಿದರೆ ಅವರು ನೀರನ್ನು ತೆಗೆದುಕೊಳ್ಳಲಿ, ಬಿಡಲಿ ವಾಟರ್ ರೇಟ್ ಹಾಕುತ್ತೇವೆ Water is made available at the field level...ಅದನ್ನು ತೆಗೆದುಕೊಳ್ಳಲಿ ಬಿಡಲಿ ವಾಟರ್ ರೇಟ್ ಹಾಕುತ್ತೇವೆ. ಅಥವಾ ಈ ದಿಕ್ಕಿನಲ್ಲಿ ಇನ್ನು ಏನಾದರೂ ಕ್ರಮ ತೆಗೆದುಕೊಳ್ಳಲಿಕ್ಕೆ ಸಾಧ್ಯ ಇದೆಯೇ ಎನ್ನುವುದನ್ನು ಪರಿಶೀಲನೆ ಮಾಡುತ್ತೇವೆ. ಈ ನಿಮಿಷದಲ್ಲಿ ಇದಕ್ಕೆ ಉತ್ತರ ಹೇಳುವುದು ಕಷ್ಟ ಆಗುತ್ತದೆ.

ಪ್ರಶ್ನೆ ಸಂಖ್ಯೆ : ೨೨೦ (೨೪೭)

ಅಧ್ಯಕ್ಷರು.—ಶ್ರೀಮತಿ ಮುಖ್ತಾರುನ್ನೀಸಾ ಬೇಗಂ (ನರಸಿಂಹರಾಜ)

ಸದಸ್ಯರು ಗೈರು ಹಾಜರಿ

ತಿಪಟೂರು ಹಾಗೂ ಚಿಕ್ಕನಾಯಕನ ಹಳ್ಳಿಯಲ್ಲಿರುವ ತೆಂಗಿನ ಮರಗಳಿಗೆ ಕಪ್ಪು, ತಲೆ ಹುಳುಗಳ ರೋಗ ಹರಡುತ್ತಿರುವುದು

೨೨೫ ಶ್ರೀ ಬಿ ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಿಪಟೂರು ಹಾಗೂ ಚಿಕ್ಕನಾಯಕನಹಳ್ಳಿ, ತಾಲ್ಲೂಕುಗಳಲ್ಲಿ ತೆಂಗಿನ ಗಿಡಗಳಿಗೆ ಕಪ್ಪು ತಲೆ ಹುಳುವಿನಿಂದ ರೋಗ ತಗಲಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ದಿನೇ ದಿನೇ ಬೃಹದಾಕಾರವಾಗಿ ಹಬ್ಬುತ್ತಿರುವ ಈ ರೋಗವನ್ನು ತಡೆಗಟ್ಟಲು ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಹಾಗೂ ಈ ರೋಗವನ್ನು ತಡೆಗಟ್ಟುವಲ್ಲಿ ತಜ್ಞರು ವಿಫಲವಾಗಿರುವುದು ನಿಜವೇ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಬಂದಿದೆ.

ಆ) ತೋಟಗಾರಿಕೆ ಇಲಾಖೆಯವರು ತಿಪಟೂರು ಹಾಗೂ ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ಈ ಕೀಟ ಭಾದೆ ಬಗ್ಗೆ ಒಂದು ಸಮೀಕ್ಷೆಯನ್ನು ನಡೆಸಿದ್ದಾರೆ. ಸುಮಾರು ೧.೪೩ ಲಕ್ಷ ತೆಂಗಿನ ಮರಗಳಲ್ಲಿ ತಿಪಟೂರು ತಾಲ್ಲೂಕಿನಲ್ಲಿಯೂ ಹಾಗೂ ೧೫.೧೦೦ ತೆಂಗಿನಮರಗಳಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿಯೂ ಈ ಕೀಟದ ಭಾದೆ ಇರುವುದು ಕಂಡು ಬಂದಿದೆ. ಈ ಮರಗಳನ್ನು ಉಪಚರಿಸಲು ಇಲಾಖಾ ವತಿಯಿಂದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಉಚಿತವಾಗಿಯೂ ಹಾಗೂ ದೊಡ್ಡ ರೈತರಿಗೆ ಶೇ.೫೦ ರ

ರಿಯಾಯಿತಿ ದರದಲ್ಲಿಯೂ ಕೀಟ ನಾಶಕವನ್ನು ಒದಗಿಸಿಕೊಡಲಾಗುತ್ತಿದೆ. ಈಗಾಗಲೇ ಸುಮಾರು ೬೫೪ ಲೀಟರ್ ಕ್ರಿಮಿ ನಾಶಕವನ್ನು ತಿಪಟೂರು ತಾಲ್ಲೂಕಿನಲ್ಲಿಯೂ ಹಾಗೂ ೧೧೩.೫ ಲೀಟರ್ ಕೀಟ ನಾಶಕವನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿಯೂ ಈ ಕೀಟದ ಉಪಟಳ ತಡೆಗಟ್ಟಲು ಒದಗಿಸಲಾಗಿದೆ ಇದೇ ರೀತಿ ತಿಪಟೂರು ತಾಲ್ಲೂಕಿನಲ್ಲಿ ೫೮.೫೯೭ ಮರಗಳನ್ನು ಹಾಗೂ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ೧೧,೩೮೮ ಮರಗಳನ್ನು ಕೀಟ ನಾಶಕದಿಂದ ಉಪಚರಿಸಲಾಗಿದೆ.

ಇದು ಅಲ್ಲದೆ, ತಿಪಟೂರು ತಾಲ್ಲೂಕಿನಲ್ಲಿ ಒಂದು ದೊಡ್ಡ ಪ್ರಮಾಣದ ಪರೋಪಜೀವಿಗಳನ್ನು ಉತ್ಪಾದಿಸುವ ಒಂದು ಪ್ರಯೋಗಶಾಲೆಯನ್ನು ತೆರೆದು ಸುಮಾರು ೫೯.೪೧ ಲಕ್ಷ ಪರೋಪಜೀವಿಗಳನ್ನು ತಿಪಟೂರು ತಾಲ್ಲೂಕಿನಲ್ಲಿಯೂ ಹಾಗೂ ೯,೦೦೦ ಪರೋಪಜೀವಿಗಳನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿಯೂ ಈ ಕೀಟ ಭಾದೆ ಬಂದಿರುವ ತೆಂಗಿನ ತೋಟಗಳಿಗೆ ಈಗಾಗಲೇ ಉಚಿತವಾಗಿ ಬಿಡಲಾಗಿದೆ.

ಈ ಕೀಟ ಭಾದೆ ಸಾಮಾನ್ಯವಾಗಿ ಬೇಸಿಗೆಯಲ್ಲಿ ತೀವ್ರವಾಗುವುದರಿಂದ ಈಗಾಗಲೇ ೮ ಸಸ್ಯ ಸಂರಕ್ಷಣಾ ದಳಗಳನ್ನು ನಿಯೋಜಿಸಿ, ಈ ಕೀಟ ಭಾದೆ ನಿಯಂತ್ರಣಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ಈ ಕೀಟ ಭಾದೆಯನ್ನು ಯಶಸ್ವಿಯಾಗಿ ತಡೆಗಟ್ಟಬೇಕಾದಲ್ಲಿ, ರೈತರ ಸಹಕಾರ ಬಹಳ ಅವಶ್ಯಕ. ಈ ಬಗ್ಗೆ ಸಾಕಾದಷ್ಟು ಮನವಿಯನ್ನು ರೈತರಿಗೆ ಮಾಡಿಕೊಂಡಿದ್ದರೂ ಕೆಲವೊಂದು ರೈತರ ಸಹಕಾರ ಇಲ್ಲದೆ ಈ ಕೀಟ ಪದೇ ಪದೇ ಮರುಕಳಿಸುತ್ತಿದೆ. ಈ ಕೀಟ ಭಾದೆ ಇರುವ ಮರಗಳನ್ನು ಸಾಮೂಹಿಕವಾಗಿ ನಿಯಂತ್ರಣಾ ಕ್ರಮಕ್ಕೆ ಒಳಪಡದಂತೆ ಯಾರಾದರೂ ಒಬ್ಬ ರೈತನು ಬಿಟ್ಟಲ್ಲಿಯೂ ಸಹ ಈ ಕೀಟ ಪುನಃ ಮರುಕಳಿಸಿ ಹರಡುತ್ತದೆ.

ಈ ಕಪ್ಪು ತಲೆ ಹುಳುವಿನ ಭಾದೆ ಮತ್ತು ಹತೋಟಿ ಬಗ್ಗೆ ತಿಪಟೂರಿನಲ್ಲಿ ಎರಡು ವಿಚಾರ ಸಂಕೀರ್ಣಗಳನ್ನು ದಿನಾಂಕ. ೪-೨-೧೯೮೫ ಮತ್ತು ೨೩-೩-೧೯೮೬ರಂದು ನಡೆಸಲಾಗಿದೆ. ಈ ವಿಚಾರ ಸಂಕೀರ್ಣಗಳಲ್ಲಿ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಸಿ.ಪಿ.ಸಿ.ಆರ್.ಐ ಕಾಸರಗೋಡಿನ ವಿಜ್ಞಾನಿಗಳು, ಇಲಾಖೆಯ ಅಭಿವೃದ್ಧಿ ಅಧಿಕಾರಿಗಳು ಹಾಗೂ ಶಾಸನ ಸಭಾ ಸದಸ್ಯರುಗಳು ಮತ್ತು ಸಂಸತ್ತಿನ ಸದಸ್ಯರುಗಳನ್ನೊಳಗೊಂಡಂತೆ ಜಿಲ್ಲೆಯ ತೆಂಗಿನ ಬೆಳೆಗಾರರೊಡನೆ ಚರ್ಚಿಸಿ ಈ ಕೀಟದ ವಿವಿಧ ನಿವಾರಣೋಪಾಯ ಕ್ರಮಗಳನ್ನು ಸಹ ರೈತರಿಗೆ ಮನವರಿಕೆ ಮಾಡಿಕೊಡಲಾಗಿದೆ. ಇದೂ ಅಲ್ಲದೆ, ಆಕಾಶವಾಣಿ ಮತ್ತು ಕರ ಪತ್ರಗಳ ಮೂಲಕ ಸಹ ಈ ಬಗ್ಗೆ ರೈತರಿಗೆ ಮನವಿ ಮಾಡಿಕೊಡ ಲಾಗಿದೆ. ಆದರೂ ಕೆಲವೊಂದು ರೈತರ ಅಸಹಕಾರದಿಂದ ಈ ಕೀಟ ಮರುಕಳಿಸುತ್ತದೆ. ಆದ್ದರಿಂದ ಈ ಕೀಟವನ್ನು ಪರಿಣಾಮಕಾರಿಯಾಗಿ ನಿರ್ಮೂಲನೇ ಪೆಸ್ಟ್ ಆಕ್ಟ್ ಪ್ರಕಾರ ನಿಯಂತ್ರಿಸಲು ಸರ್ಕಾರ ತೀವ್ರ ರೀತಿಯಲ್ಲಿ ಪರಿಶೀಲಿಸುತ್ತದೆ.

ಈ ರೋಗವನ್ನು ತಡೆಗಟ್ಟಲು ಸೂಕ್ತ ತಾಂತ್ರಿಕ ಮಾಹಿತಿ ದೊರೆತಿದೆ. ತಜ್ಞರು ಈ ರೋಗ ವನ್ನು ತಡೆಗಟ್ಟಲು ವಿಫಲರಾಗಿರುವುದಿಲ್ಲ.

ಶ್ರೀ ಬಿ. ಲಕ್ಷ್ಮಪ್ಪ.—ಮಾನ್ಯ ಅಧ್ಯಕ್ಷರೇ, ತಿಪಟೂರು ತಾಲ್ಲೂಕು ಚಿಕ್ಕನಾಯಕನಹಳ್ಳಿಯಲ್ಲಿ ಈ ತೆಂಗಿನ ಬೆಳೆ ಅನ್ನುವುದು ಮುಖ್ಯ ವಾಣಿಜ್ಯ ಬೆಳೆಯಾಗಿದೆ. ಇದರ ಬಗ್ಗೆ ೧೨ ವರ್ಷಗಳಿಂದಲೂ ಕೂಡ ವಿಚಾರ ಸಂಕೀರ್ಣ ನಡೆದಿದೆ. ಇದಕ್ಕೆ ಔಷಧಿಯನ್ನೂ ಕೂಡ ಕೊಟ್ಟಿದ್ದಾರೆ. ಆದರೆ ಈ ರೋಗವನ್ನು ತಡೆಗಟ್ಟುವುದರಲ್ಲಿ ಇಲಾಖೆಯವರು ಪೂರ್ಣವಾಗಿ ವಿಫಲರಾಗಿದ್ದಾರೆ. ಸುಮಾರು ೧,೪೩ ಲಕ್ಷ ತೆಂಗಿನ ಮರಗಳಲ್ಲಿ ತಿಪಟೂರು ತಾಲ್ಲೂಕಿನಲ್ಲಿಯೂ ಹಾಗೂ ೧೫.೦೦೦ ತೆಂಗಿನ ಮರಗಳಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿಯೂ ಈ ಕೀಟದ ಭಾದೆ ಇದೆ. ಮೊದಲು ಈ ರೋಗ ಇರಲೇ ಇಲ್ಲ ಈಗ ಇದು ಬಹಳ ಸ್ಪ್ರೆಡ್ ಆಗುತ್ತಾ ಇದೆ. ಇದರಿಂದ ಆ ಊರಿನ ಜನರು ಈ ತೆಂಗಿನ ಗಿಡ ಗಳನ್ನು ಬೆಳೆಯುವುದಕ್ಕೆ ಮುಂದೆ ಬರುತ್ತಾ ಇಲ್ಲ ಈ ಬಗ್ಗೆ ಅಧಿಕಾರಿಗಳು, ತಜ್ಞರು ಇದನ್ನು ತಡೆಗಟ್ಟುವುದರಲ್ಲಿ ವಿಫಲರಾಗಿದ್ದಾರೆ. ತಾವು ಇದರ ನಿವಾರಣೆಗೆ ಔಷಧಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಆದರೂ ಅದರಿಂದ ಏನೂ ಪರಿಣಾಮವೇನೂ ಆಗಿಲ್ಲ ಇದರಿಂದ ಆಲ್ಲಿರುವ ರೈತರಿಗೂ ಹಾಗೂ ಅತಿ ಸಣ್ಣ ರೈತರಿಗೂ ಸರಿಯಾಗಿ ಫಲ ಸಿಕ್ಕುತ್ತಾ ಇಲ್ಲ. ಇದರಿಂದ ನಷ್ಟವಾಗಿರತಕ್ಕಂಥ

ರೈತರಿಗೆ ತಾವು ಏನು ಪರಿಹಾರ ಕಾರ್ಯಕ್ರಮ ಕೈಗೊಳ್ಳುತ್ತೀರಾ ಮಂತ್ರಿ ಈ ರೋಗಕ್ಕೆ ಒಳಗಾಗಿರ ತಕ್ಕಂಥ ರೈತರಿಗೆ ಪರಿಹಾರ ಕೊಡುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ?

ಅಧ್ಯಕ್ಷರು.—ಇಷ್ಟು ಉದ್ದ ಭಾಷಣ ಮಾಡುವ ಬದಲು ಇದಕ್ಕೆ ಏನು ಪರಿಹಾರ ಕೊಡುತ್ತೀರಿ ಎನ್ನುವುದನ್ನು ಕೇಳಿದರೆ ಸಾಕು.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ತಜ್ಞರು ಇದನ್ನು ತಡೆಗಟ್ಟುವುದರಲ್ಲಿ ವಿಫಲರಾಗಿದ್ದಾರೆ ಎಂದು ಏನು ಆದ ಇಟ್ಟಿದ್ದಾರೆ ಅದು ಸರಿಯಲ್ಲ. ಈ ರೋಗ ವನ್ನು ಕಂಟ್ರೋಲ್ ಮಾಡತಕ್ಕಂಥಾದ್ದರಲ್ಲಿ ಅವರು ಬಹಳ ತೃಪ್ತಿಕರವಾದ ರೀತಿಯಲ್ಲಿ ಮಾಡಿದ್ದಾರೆ. ಆದರೆ ಈ ಒಂದು ರೋಗ ಬರೀ ತೆಂಗಿನ ಮರಗಳಿಗೆ ಮಾತ್ರಬರುವುದಿಲ್ಲ, ಬೇರೆ ಈಚಲು ಮರಗಳಿಗೂ ಮತ್ತು ತಾಳೆಗರಿ ಗಿಡಗಳಿಗೂ ಪುನಃ ಪುನ: ಬರುತ್ತದೆ. ಆದುದರಿಂದ ಇದರ ಬಗ್ಗೆ ಸರ್ಕಾರದವರು ಸಮಗ್ರವಾಗಿ ಯೋಚನೆ ಮಾಡಿ ಮುಂದೆ ಏನು ಕಾರ್ಯಕ್ರಮ ಕೈಗೊಳ್ಳಬೇಕೆನ್ನುವ ವಿಚಾರ ಸರ್ಕಾರದ ಮುಂದೆ ಇದೆ. ಇದರ ಬಗ್ಗೆ ಶಾಸಕರ ಕಳಕಳಿ ಏನು ಇದೆ ಅದನ್ನೂ ಕೂಡ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ.

ಶ್ರೀ ಬಿ. ಲಕ್ಕಪ್ಪ.—ನಾನು ಮಾನ್ಯ ಮಂತ್ರಿಗಳನ್ನು ಈ ಸಂದರ್ಭದಲ್ಲಿ ಕೇಳುವುದು ಇಷ್ಟೆ. ಈ ಒಂದು ರೋಗವನ್ನು ತಡೆಗಟ್ಟುವುದಕ್ಕೆ ತೀವ್ರವಾದ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಮತ್ತು ಈ ಬೆಳೆಯಿಂದ ನೊಂದಿರತಕ್ಕಂಥ ರೈತರಿಗೆ ಪರಿಹಾರ ಕೊಡುವುದಕ್ಕೆ ಏನು ಯೋಚನೆ ಮಾಡಿದ್ದೀರಿ? ೧೨ ವರ್ಷಗಳಿಂದಲೂ ಕೂಡ ಈ ಒಂದು ರೋಗವನ್ನು ತಡೆಗಟ್ಟುವುದಕ್ಕೆ ಆಗಲಿಲ್ಲ. ತಾವು ಇದರ ಬಗ್ಗೆ ಔಷಧಿಯನ್ನು ಹೊಡೆಸಿದ್ದರೂ ಕೂಡ ಏನೂ ಪ್ರಯೋಜನವಾಗಲಿಲ್ಲ. ಈ ಬಗ್ಗೆ ತೀವ್ರವಾದ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಈ ರೋಗವನ್ನು ತಡೆಗಟ್ಟಲು ನಮ್ಮ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ ಇದಕ್ಕೆ ಸಂಬಂಧಪಟ್ಟ ಡೆಮಾನ್‌ಸ್ಟ್ರೇಷನ್ ಕಾರ್ಯಕ್ರಮದಲ್ಲಿ ಮಾನ್ಯ ಸದಸ್ಯರು ಸಹ ಭಾಗವಹಿಸಿದ್ದಾರೆ, ಕೆಲವು ಕಡೆಗಳಲ್ಲಿ ಏನಾದರೂ ತೆಂಗಿನಗರಿಗಳಂ ಬಣಗಿದ್ದರೆ ಪರಿಹಾರ ಸಿಕ್ಕಿಲ್ಲ ಎಂಬ ಭಾವನೆಯನ್ನು ಮಾನ್ಯ ಸದಸ್ಯರು ಹೊಂದಿದ್ದಾರೆ. ಆದರೆ ಆ ಭಾವನೆ ಸರಿಯಲ್ಲ. ಈ ರೋಗವನ್ನು ತಡೆಗಟ್ಟಲಂ ನಾವು ಕ್ರಮ ತೆಗೆದುಕೊಂಡಿರುವುದರ ಜೊತೆಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಪರಿಹಾರ ಕೈಕೊಳ್ಳುವ ಬಗ್ಗೆ ಮಾನ್ಯ ಸದಸ್ಯರು ಏನಾದರೂ ಸಲಹೆ ಕೊಟ್ಟರೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ,

ಶ್ರೀ ಬಿ. ಲಕ್ಕಪ್ಪ —ಈಗ ತೆಂಗಿನಗರಿಗಳ ಜೊತೆಗೆ ಸಂಪಿಯಲ್ಲಿರುವ ಗರಿಗಳು ಸಹ ಒಣಗಿ ಹೋಗಿವೆ. ದಿನೇದಿನೇ ಈ ರೋಗ ಚಿಕ್ಕನಾಯಕನಹಳ್ಳಿ,, ತುರುವೇಕೆರೆ ತಿಪಟೂರು ಹಾಗೂ ಇನ್ನಿತರ ಕಡೆಗಳಲ್ಲಿ ಹಬ್ಬುತ್ತಿದೆ. ಆದ್ದರಿಂದ ಇದನ್ನು ತಡೆಗಟ್ಟಲು ಎಷ್ಟು ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ? ಏಂಬುದನ್ನು ತಾವು ಹೇಳಬೇಕು?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಈ ರೋಗ ಯಾವ ಯಾವ ಗ್ರಾಮದಲ್ಲಿ ಇದೆ ಎಂದು ಮಾನ್ಯ ಸದಸ್ಯರು ಹೇಳಿದರೆ,ಅಲ್ಲಿಗೆ ನಾಳೆಯೇ ನಮ್ಮ ತಜ್ಞರನ್ನು ಕಳುಹಿಸಲು ವ್ಯವಸ್ಥೆ ಮಾಡುತ್ತೇನೆ. ಕೆಲವರು ಔಷಧ ಮತ್ತು ಚುಚ್ಚುಮದ್ದು ಕೊಡಿಸಿ ಮತ್ತೆ ಕೆಲವರು ಕೊಡಿಸದಿದ್ದರೆ ಈ ರೋಗ ಮಂತ್ರೆ ಹರಡುತ್ತದೆ. ಆದ್ದರಿಂದ ಈ ಬಗ್ಗೆ ಸಮಗ್ರವಾಗಿ ಕಂಟ್ರೋಲ್ ಮಾಡುವಂತಹ ಕ್ರಮವನ್ನು ಸರ್ಕಾರ ಕೈಕೊಳ್ಳುವವರೆಗೆ ಈ ಪರಿಸ್ಥಿತಿ ಇರುವುದು ಸಹಜ. ಈ ಬಗ್ಗೆ ಸರ್ಕಾರದ ಮುಂದೆ ಒಂದು ಯೋಜನೆ ಇದೆ. ಅದನ್ನು ತೀವ್ರಗತಿ ಯಲ್ಲಿ ಜಾರಿಗೆ ತರುತ್ತೇವೆ.